**ಸಾಕ್ಷಿಗೆ ದಿನಾಂಕಃ 07-01-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ ಎ.ಎನ್.ಟಿ ವಕೀಲರಿಂದಃ**

ಈ ಅರ್ಜಿಗೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.–1 | ಹೆಚ್.ಆರ್.ಸಿ 6/94 ರಲ್ಲಿ ಸಲ್ಲಿಸಲಾಗಿದ್ದ ತಕರಾರಿನ ದೃಢಿಕೃತ ನಕಲು |
| ನಿ.ಪಿ.–2 | ಸ್ವಯಂ ತೆರಿಗೆ ನಿರ್ಧಾರಣ ನಮೂನೆ |
| ನಿ.ಪಿ.–3 ರಿಂದ 16 | ಕಂದಾಯ ಪಾವತಿ ರಶೀದಿಗಳು |
| ನಿ.ಪಿ.–17 | ಎಸ್.ಸಿ 16/2024 ರಲ್ಲಿನ ಪ್ರತಿವಾದ ಪತ್ರದ ದೃಢಿಕೃತ ನಕಲು |
| ನಿ.ಪಿ.–18 | ಎಸ್.ಸಿ 16/2024 ರಲ್ಲಿನ ತಕರಾರಿನ ದೃಢಿಕೃತ ನಕಲು |
| ನಿ.ಪಿ.–19 | ಎಸ್.ಸಿ 16/2024 ರಲ್ಲಿನ ಆದೇಶ ಪುಟಗಳ ದೃಢಿಕೃತ ನಕಲು |
| ನಿ.ಪಿ.–20 | ಎಸ್.ಸಿ 16/2024 ರಲ್ಲಿನ ತೀರ್ಪಿನ ದೃಢಿಕೃತ ನಕಲು |
| ನಿ.ಪಿ.–21 | ಎಸ್.ಸಿ 16/2024 ರಲ್ಲಿನ ಡಿಕ್ರಿಯ ದೃಢಿಕೃತ ನಕಲು |
| ನಿ.ಪಿ.–22 ಮತ್ತು 23 | ನಗರ ಸಭೆ ಪೌರಯುಕ್ತರಿಗೆ ಕೊಟ್ಟ ದೂರುಗಳು |
| ನಿ.ಪಿ.–24 | ನಗರ ಸಭೆಯವರು ಕೊಟ್ಟಿದ್ದ ನೋಟಿಸು |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**